# ಅಂತರಿಕ್ಷದಲ್ಲಿ ಮಹಿಳೆ

ಯೂರಿ ಗಗಾರಿನ್ 1961ರಲ್ಲಿ ಅಂತರಿಕ್ಷಕ್ಕೆ ತೆರಳಿದ ಮೂರು ವರ್ಷಗಳ ಒಳಗೇ ವ್ಯಾಲಂತೀನಾ ತೆರೆಸ್ಕೋವಾ ಅಂತರಿಕ್ಷದಲ್ಲಿ ಭೂಮಿಯನ್ನು ಸುತ್ತಿ ಸುರಕ್ಷಿತವಾಗಿ ವಾಪಸ್ ಬಂದಳು. ಅಂತರಿಕ್ಷದಲ್ಲಿನ ಮೊದಲ ಮಹಿಳೆಯೆನ್ನಿಸಿಕೊಂಡ ತೆರೆಸ್ಕೋವಾ ಸಹ ಸೋವಿಯತ್ ಪ್ರಜೆಯೇ ಆಗಿದ್ದುದು ರಷ್ಯಾಗೆ ಜಗತ್ತಿನಾದ್ಯಂತ ಭಾರಿ ಪ್ರಚಾರ ದೊರಕಿಸಿಕೊಟ್ಟಿತು.

ಬಹುಮಟ್ಟಿಗೆ ಪ್ರಾಪಗೆಂಡಾದ ದೃಷ್ಟಿಯಿಂದ ಕೈಗೊಳ್ಳಲಾದ ಆ ಯಾನ ಜರುಗಿದ ನಂತರ 19 ವರ್ಷಗಳ ಕಾಲ ಯಾವ ಮಹಿಳೆಯೂ ಅಂತರಿಕ್ಷಕ್ಕೆ ತೆರಳಲಿಲ್ಲ. ಆದರೆ ಅಮೆರಿಕ ತನ್ನ ಮೊದಲ ಮಹಿಳಾ ಗಗನಯಾತ್ರಿ ಸ್ಯಾಲಿ ರೈಡ್‌ಳನ್ನು ಉಡಾಯಿಸುವುದಕ್ಕೆ ಸ್ವಲ್ಪ ಮೊದಲೇ ಅದರ ಪ್ರಬಲ ಪ್ರತಿಸ್ಪರ್ಧಿ ಸೋವಿಯತ್ ರಷ್ಯಾ 1982ರಲ್ಲಿ ಸ್ವೆತ್ಲಾನ ಸವಿತ್ ಸ್ಕಾಯಾಳನ್ನು ಭೂಕಕ್ಷೆಗೆ ಕಳುಹಿಸಿತು. ಹೀಗೆ ಅಂತರಿಕ್ಷದ ಎರಡನೇ ಮಹಿಳೆಯೂ ರಷ್ಯನ್ನಳೇ ಆದಳು.

ಸ್ಯಾಲಿ ರೈಡ್ ಅಂತರಿಕ್ಷ ಶಟಲ್‌ನಲ್ಲಿ ಅಂತರಿಕ್ಷಯಾನ ಮಾಡಿ ಬಂದ ನಂತರ ಆ ದೇಶದ ಅನೇಕ ಮಹಿಳೆಯರು ಅಂತರಿಕ್ಷಕ್ಕೆ ತೆರಳಿದ್ದಾರೆ. ಅವರಲ್ಲಿ ಒಬ್ಬರು ಸ್ಪೇಸ್ ಶಟಲ್‌ನ ಕಮ್ಯಾಂಡರ್ ಸಹ ಆಗಿದ್ದರು. ಕೆಲವು ಅಮೆರಿಕನ್ ಮಹಿಳೆಯರು ಪೈಲಟ್‌ಗಳಾಗಿಯೋ ವಿಜ್ಞಾನಿಗಳಾಗಿಯೋ ಅಂತರಿಕ್ಷಯಾನ ಕೈಗೊಂಡು ತಮಗೆ ವಹಿಸಿದ ಕಾರ್ಯವನ್ನು ಸಮರ್ಥವಾಗಿ ಭೂಕಕ್ಷೆಯಲ್ಲಿ ನಿರ್ವಹಿಸಿದ್ದಾರೆ. ಈ ನಿಟ್ಟಿನಲ್ಲಿ ಭಾರತೀಯ ತಂದೆಯ ಮಗಳಾಗಿ ಜನಿಸಿದ ಸುನೀತಾ ವಿಲಿಯಮ್ಸ್ ಅವರ ಸಾಧನೆಯನ್ನೇ ಉದಾಹರಣೆಯಾಗಿ ನೀಡಬಹುದು. ತಮ್ಮ ನಾಸಾದ ಗಗನಯಾತ್ರಿ ವೃತ್ತಿಯಲ್ಲಿ ಅವರು ಎರಡು ಬಾರಿ (2006–7, 2012) ಅಂತರಿಕ್ಷಯಾನವನ್ನು ಮಾಡಿದ್ದಾರೆ. ಅನೇಕ ತಿಂಗಳುಗಳ ಕಾಲ ಅಂತರರಾಷ್ಟ್ರೀಯ ಅಂತರಿಕ್ಷ ನಿಲ್ದಾಣದಲ್ಲಿ ಸತತವಾಗಿ ವಾಸಿಸುವ ಮೂಲಕ ಮತ್ತು ಕೆಲ ಕಾಲ ಕಮ್ಯಾಂಡರ್ ಆಗಿ ಕಾರ್ಯನಿರ್ವಹಿಸುವ ಮೂಲಕ ದಾಖಲೆ ಸ್ಥಾಪಿಸಿದ ಮಹಿಳೆ ಅವರಾಗಿದ್ದಾರೆ. ಅಂತರಿಕ್ಷದಲ್ಲಿ ದಿನಕ್ಕೆ ಹದಿನೈದು ಬಾರಿ ಭೂಮಿಯನ್ನು ಸುತ್ತುವ 'ಐ.ಎಸ್‌.ಎಸ್‌.'ನಲ್ಲಿ ದಿನನಿತ್ಯದ ಜೀವನ ಹೇಗಿರುತ್ತದೆ ಎಂಬುದನ್ನು ಮನಮುಟ್ಟುವಂತೆ ವಿವರಿಸುವ ಅವರ ವಿಡಿಯೊ ಯುಟ್ಯೂಬ್‌ನಲ್ಲಿ ಜಗತ್ತಿನಾದ್ಯಂತ ಜನಪ್ರಿಯವಾಗಿದೆ.



ಅಂತರಿಕ್ಷದಲ್ಲಿ ಹಲ್ಲುಜ್ಜುವುದನ್ನು ತೋರಿಸುತ್ತಿರುವ ಸುನೀತಾ ವಿಲಿಯಂಸ್. ಚಿತ್ರಕೃಪೆ: 'ನಾಸಾ'

ಪುರುಷ ಸಹೋದ್ಯೋಗಿಗಳಂತೆಯೇ ಮಹಿಳಾ ಗಗನಯಾತ್ರಿಗಳೂ ಅಂತರಿಕ್ಷಯಾನದ ನಡುವೆ ಕಂಡುಬರುವ ಅಪಾಯಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಅವರಲ್ಲಿ ಕೆಲವರು ಅಂತರಿಕ್ಷಯಾನದ ನಡುವೆ ಪ್ರಾಣವನ್ನೂ ನೀಗಿದ್ದಾರೆ.

1986 ಜನವರಿ 28ರಂದು ಉಡಾಯಿಸಲಾದ ಅಮೆರಿಕದ 'ಛಾಲೆಂಜರ್' ಎಂಬ ಸ್ಪೇಸ್ ಶಟಲ್ (ರಾಕೆಟ್ ವಿಮಾನ) ಮೇಲೇರಿದ 73 ಸೆಕೆಂಡುಗಳ ನಂತರ ಆಸ್ಫೋಟನೆಗೊಂಡು, ಅದರಲ್ಲಿದ್ದ ಏಳು ಗಗನಯಾತ್ರಿಗಳು ಮಡಿದರು. ಆ ಪೈಕಿ ನಾಸಾದ ಗಗನಯಾತ್ರಿ ಜುಡಿತ್ ರೆಸ್ನಿಕ್ ಮತ್ತು 'ಅಂತರಿಕ್ಷದಲ್ಲಿನ ಮೊದಲ ಶಿಕ್ಷಕಿ' ಎಂಬ ಖ್ಯಾತಿಯನ್ನು ಪಡೆಯಲಿದ್ದ ಕ್ರಿಸ್ಟಾ ಮೆಕಾಲಿಫ್ ಸಹ ಸೇರಿದ್ದರು.

2003ರ ಫೆಬ್ರುವರಿ 1ರಂದು ಭೂಕಕ್ಷೆಯಿಂದ ಧರೆಗೆ ಮರಳುತ್ತಿದ್ದ 'ಕೊಲಂಬಿಯಾ' ಎಂಬ ಅಮೆರಿಕದ ಸ್ಪೇಸ್ ಶಟಲ್ ತಾಂತ್ರಿಕ ತೊಂದರೆಯೊಂದರಿಂದಾಗಿ ಚೂರುಚೂರಾಯಿತು. ಅದರಲ್ಲಿದ್ದ ಏಳು ಗಗನಯಾತ್ರಿಗಳ ಪೈಕಿ ಭಾರತೀಯ ಸಂಜಾತೆಯಾದ ನಾಸಾ ಗಗನಯಾತ್ರಿ ಕಲ್ಪನಾ ಚಾವ್ಲಾ ಹಾಗೂ ಮತ್ತೊಬ್ಬ ಮಹಿಳಾ ಗಗನಯಾತ್ರಿ ಲಾರಲ್ ಸಾಲ್ಟನ್ ಬ್ಲೇರ್ ಸಾವಿಗೀಡಾದರು.



'ಛಾಲೆಂಜರ್' ಅಪಘಾತದಲ್ಲಿ ಮಡಿದ ಏಳು ಧೀರ ಗಗನಯಾತ್ರಿಗಳು. ಚಿತ್ರಕೃಪೆ: 'ನಾಸಾ'

ಇಂತಹ ನೌಕೆಗಳಿಗೆ 'ಅಂತರಿಕ್ಷ ನಿಲ್ದಾಣ'ಗಳೆಂದು (ಸ್ಪೇಸ್ ಸ್ಟೇಷನ್ಸ್) ಹೆಸರು.

ರಷ್ಯಾದ 'ಸಲ್ಯೂತ್' ಸರಣಿಯ ಇಂತಹ ಅಂತರಿಕ್ಷ ನಿಲ್ದಾಣಗಳಲ್ಲಿ ಆ ದೇಶದ ಹಾಗೂ ಇತರ ಕೆಲವು ಸಮಾಜವಾದಿ ರಾಷ್ಟ್ರಗಳ ಗಗನಯಾತ್ರಿಗಳು ವಾಸಮಾಡಿ ಬಂದರು. ದೀರ್ಘಕಾಲದ ಅಂತರಿಕ್ಷಯಾನವು ಮಾನವನ ಮೇಲೆ ಬೀರುವ ದೈಹಿಕ ಮತ್ತು ಮಾನಸಿಕ ದುಷ್ಪರಿಣಾಮಗಳನ್ನು ಅಭ್ಯಸಿಸುವುದು ಮತ್ತು ಅವುಗಳನ್ನು ಸಮರ್ಥವಾಗಿ ಎದುರಿಸುವ ವಿಧಾನಗಳನ್ನು ಕಂಡುಕೊಳ್ಳುವುದು ಹಾಗೂ ಅಂತರಿಕ್ಷ ಪರಿಸರವನ್ನು ಶುದ್ಧವಾದ ಸ್ಫಟಿಕ (ಕ್ರಿಸ್ಟಲ್) ಹಾಗೂ ಔಷಧಿಗಳೂ ಸೇರಿದಂತೆ ವಿವಿಧ ಶುದ್ಧ ವಸ್ತುಗಳ ತಯಾರಿಕೆಗೆ ಬಳಸಿಕೊಳ್ಳುವುದು 'ಅಂತರಿಕ್ಷ ನಿಲ್ದಾಣ'ಗಳನ್ನು ಉಡಾಯಿಸಿದ ಉದ್ದೇಶವಾಗಿತ್ತು.

'ಅಂತರಿಕ್ಷ ನಿಲ್ದಾಣ'ಗಳ ಸಾಲಿನಲ್ಲಿ



ಭೂಮಿಯನ್ನು ಸುತ್ತುತ್ತಿರುವ ಅಮೇರಿಕದ ಸ್ಕೈಲ್ಯಾಬ್ ಅಂತರಿಕ್ಷ ನಿಲ್ದಾಣ. ಚಿತ್ರಕೃಪೆ: 'ನಾಸಾ'